# ‘ಸೀಫುಡ್’ ಇಷ್ಟ ’



ಮಲೇಷ್ಯಾದಿಂದ ಬಂದ ಜಿಮ್ಮಿ ಯುವೊ

– ಚಿತ್ರ: ಬಿ.ಕೆ.ಜನಾರ್ಧನ್

ಜಿಮ್ಮಿ ಯುವೊ ಸಾಹಸ ಮನೋಭಾವದವರು. ಖಾಸಗಿ ಕಂಪೆನಿಯೊಂದರಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ (ಸಿಇಒ) ಆಗಿರುವ ಜಿಮ್ಮಿ ಮಲೇಷ್ಯಾದಿಂದ ಬಂದವರು. ಕೆಲಕಾಲ ಜಿಮ್ಮಿ ಚೀನಾದ ಶಾಂಘೈನಲ್ಲಿದ್ದರು. ಅಲ್ಲಿಂದ ಬೆಂಗಳೂರಿಗೆ ಬಂದದ್ದೇ ಇವರದ್ದೊಂದು ಸಾಹಸ ಅಂತೆ.

ಜಿಮ್ಮಿ ಮಲೇಷ್ಯಾದವರಾದರೂ ಅವರು ಓದಿದ್ದು ಆಸ್ಟ್ರೇಲಿಯಾದಲ್ಲಿ ಎಂಜಿನಿಯರಿಂಗ್ ಪದವಿ. ಆಸ್ಟ್ರೇಲಿಯಾದಲ್ಲೇ ವೃತ್ತಿಜೀವನವೂ ಆರಂಭ. ಅಲ್ಲಿಂದ ಶಾಂಘೈಗೆ ಪಾದಾರ್ಪಣೆ ಮಾಡಿದ ಜಿಮ್ಮಿ, ಭಾರತದಲ್ಲಿ ಹೆಚ್ಚಿನ ಉದ್ಯೋಗಾವಕಾಶ ಮತ್ತು ಗಳಿಕೆಯನ್ನು ಮನಗಂಡು ಅಲ್ಲಿಂದ ಇಲ್ಲಿಗೆ ಬಂದರು. ‘ಇಲ್ಲಿನ ಅವಕಾಶ ನಿಜಕ್ಕೂ ಅದ್ಭುತ ಅನುಭವವನ್ನೇ ನೀಡುತ್ತಿದೆ’ ಎನ್ನುತ್ತಾರೆ ಜಿಮ್ಮಿ.

ಆಸ್ಟ್ರೇಲಿಯಾದಲ್ಲಿ ಸ್ನೇಹಿತರ ದೊಡ್ಡ ದಂಡೇ ಇತ್ತಂತೆ. ಕೆಲಸದ ವಿಚಾರವಾಗಿ ಇವರೊಂದಿಗೆ ಸಾಕಷ್ಟು ಚರ್ಚೆ ನಡೆಸುತ್ತಿದ್ದರಂತೆ. ಶಾಂಘೈಯಲ್ಲೂ ಹಲವು ಗೆಳೆಯರೊಡನೆ ಕೆಲಸ ಮಾಡುತ್ತಿದ್ದರಂತೆ. ಇಲ್ಲಿಗೆ ಬರುವ ಮುನ್ನ ಗೆಳೆಯರೇ ಇಲ್ಲದ ಊರಿನಲ್ಲಿ ‘ಹೇಗಪ್ಪಾ ಕೆಲಸ ಮಾಡೋದು’ ಎಂಬ ಚಿಂತೆ ಕಾಡಿತ್ತಂತೆ. ಆದರೆ ಇಲ್ಲಿ ಎಲ್ಲರೂ ಸ್ನೇಹಮಯವಾಗಿ, ಆತ್ಮೀಯವಾಗಿ ಮಾತನಾಡಿಸುವುದು ಖುಷಿ ತಂದಿದೆಯಂತೆ. ಜೊತೆಗೆ ಹಲವು ಜನ ಸ್ನೇಹಿತರಾಗಿದ್ದಾರಂತೆ.

ಮಲೇಷ್ಯಾದ ಪೆನಾಗ್ ಜಿಮ್ಮಿ ಅವರ ಸ್ವಂತ ಊರು. ವರ್ಷಕ್ಕೆ ಮೂರು ನಾಲ್ಕು ಬಾರಿ ಹೋಗಿ ವಾರ ಕಾಲ ಕುಟುಂಬ ಸದಸ್ಯರ ಜತೆ ಕಳೆದು, ರುಚಿಕರ ಊಟ ತಿಂಡಿ ತಿಂದು ಬರುತ್ತೇನೆ. ನಮ್ಮ ಊರು ಒಂದು ದ್ವೀಪ ಇದ್ದ ಹಾಗೆ ಇದೆ. ಅಲ್ಲಿ ಸೀಫುಡ್ ಯಥೇಚ್ಛವಾಗಿ ಸಿಗುತ್ತದೆ. ನಮ್ಮ ತಾಯಿ ಥಾಯ್ಲ್ಯಾಂಡ್‌ನವರು, ತಂದೆ ಮಲೇಷ್ಯಾದವರೇ. ತಾಯಿ ಚೆನ್ನಾಗಿ ಅಡುಗೆ ಮಾಡುತ್ತಾರೆ. ಸೀಫುಡ್ ಅಡುಗೆ ನನಗೆ ತುಂಬ ಇಷ್ಟ’ ಎಂದು ತಮ್ಮ ಆಹಾರ ಪದ್ಧತಿಯನ್ನು ವಿವರಿಸುತ್ತಾರೆ ಜಿಮ್ಮಿ.

ನಾನು ಇಲ್ಲಿ ಬಂದ ಮೇಲೆ ಬಹಳ ತಾಳ್ಮೆ ಕಲಿತಿದ್ದೇನೆ. ಯಾವಾಗಲೂ ಸಕಾರಾತ್ಮಕವಾಗಿ ಚಿಂತನೆ ನಡೆಸುತ್ತೇನೆ. ಇಲ್ಲಿಯ ಕೆಲಸದ ವಾತಾವರಣ ತಾಳ್ಮೆ, ಸಹನೆ, ಆತ್ಮವಿಶ್ವಾಸ ಎಲ್ಲವನ್ನೂ ಕಲಿಸುತ್ತದೆ. ಬಹಳಷ್ಟು ಕಲಿತಿದ್ದೇನೆ, ವ್ಯಕ್ತಿತ್ವ ವಿಕಸನಕ್ಕೆ ಇಲ್ಲಿ ಒಳ್ಳೆಯ ಅವಕಾಶವಿದೆ ಎಂಬುದನ್ನು ನಾನು ಬಲ್ಲೆ. ಒಳ್ಳೊಳ್ಳೆಯ ಪುಸ್ತಕ ಓದುವ ಹವ್ಯಾಸ ಬೆಳೆಸಿಕೊಂಡಿದ್ದೇನೆ.. ಮುಂತಾದ ಸೈದ್ಧಾಂತಿಕ ವಿಚಾರಗಳನ್ನು ಬಿಚ್ಚಿಡುತ್ತಾರೆ ಜಿಮ್ಮಿ.

ಸಾಫ್ಟ್‌ವೇರ್ ವೃತ್ತಿ ಹಿಡಿದಿರುವ ಪ್ರಪಂಚದ ಎಲ್ಲ ಪದವೀಧರರಿಗೂ ಬೆಂಗಳೂರು ಬಗ್ಗೆ ಚೆನ್ನಾಗಿ ಗೊತ್ತು. ಔದ್ಯೋಗಿಕ ನಿಟ್ಟಿನಲ್ಲಿ ಬೆಂಗಳೂರು ಜಾಗತಿಕವಾಗಿ ಗುರುತಿಸಿಕೊಂಡಿರುವುದು ಇದಕ್ಕೆ ಕಾರಣ. ಇದಕ್ಕಾಗಿಯೇ ‘ಬೆಂಗಳೂರು ಸಿಲಿಕಾನ್ ವ್ಯಾಲಿ ಆಫ್ ಇಂಡಿಯಾ’ ಎಂದು ಪ್ರಸಿದ್ಧಿಯಾಗಿರುವುದು ಎಂದು ತಮ್ಮ ಅಭಿಪ್ರಾಯ ಮಂಡಿಸುತ್ತಾರೆ ಇವರು.

ತಮ್ಮ ಊರು ಪೆನಾಗ್, ವ್ಯಾಪ್ತಿಯಲ್ಲಿ ಬೆಂಗಳೂರಿಗಿಂತ ಹತ್ತು ಪಟ್ಟು ಚಿಕ್ಕದು ಅಂತೆ. ದ್ವೀಪ ಊರು ಆಗಿದ್ದರೂ ಹವಾಮಾನದ ನಿಟ್ಟಿನಲ್ಲಿ ಬೆಂಗಳೂರೇ ಅವರಿಗೆ ಹೆಚ್ಚು ಇಷ್ಟವಾಯಿತಂತೆ. ಅವರ ಮನೆಯಲ್ಲಿ ಎಷ್ಟೇ ‘ಕಂಫರ್ಟ್’ಗಳು ಇದ್ದರೂ, ಕುಟುಂಬದ ಸದಸ್ಯರನ್ನು ಬಿಟ್ಟು ಬಂದಿದ್ದರೂ ಅವರಿಗೆ ಈಚೀಚೆಗೆ ಬೆಂಗಳೂರು ಬೋರ್ ಅಂತ ಅನಿಸುವುದೇ ಇಲ್ಲವಂತೆ. ಇದಕ್ಕೆ ಮುಖ್ಯ ಕಾರಣ ದಿನದ ಬಹುತೇಕ ಸಮಯವನ್ನು ವೃತ್ತಿಬದುಕಿನಲ್ಲಿ ಕಳೆಯುವುದು, ಓದುವ ಹವ್ಯಾಸ ಇಟ್ಟುಕೊಂಡಿರುವುದೇ ಆಗಿದೆ ಎಂಬುದನ್ನು ಅವರು ಮನಗಂಡಿದ್ದಾರೆ.

ಬೆಂಗಳೂರನ್ನು ಇಷ್ಟೊಂದು ಹೊಗಳುವ ನೀವು ಭಾರತ ದೇಶದ ಬೇರೆ ಯಾವುದೇ ನಗರವನ್ನಾಗಲಿ, ಪ್ರವಾಸಿ ತಾಣವನ್ನಾಗಲಿ, ಚಾರಿತ್ರಿಕ ಜಾಗಗಳನ್ನಾಗಲಿ ನೋಡಿಲ್ಲವೇ? ಎಂಬ ಪ್ರಶ್ನೆಗೆ ಮಲೇಷ್ಯಾದಿಂದ ಇಲ್ಲಿಗೆ ಬಂದು ಎರಡು ವರ್ಷಗಳೇ ಕಳೆದರೂ ಯಾವುದೇ ಬೇರೆ ಊರು, ಜಾಗ, ಪ್ರವಾಸಿ ತಾಣಗಳನ್ನು ಅವರು ಹೋಗಿ ನೋಡಿಲ್ಲವಂತೆ. ‘ನೋಡಬೇಕು ಎಂಬ ಆಸಕ್ತಿ ಇದ್ದರೂ ಇನ್ನೂ ಸಮಯ ಸಿಕ್ಕಿಲ್ಲ. ನೋಡಲೇಬೇಕು ಎಂದು ಕೆಲವು ಪ್ರವಾಸಿ ಜಾಗಗಳನ್ನು ಗುರುತು ಹಾಕಿಕೊಂಡಿದ್ದೇನೆ. ಸದ್ಯದಲ್ಲೇ ತಿರುಗಾಟ ಆರಂಭಿಸಬೇಕು, ಕನಿಷ್ಠ ವಾರಾಂತ್ಯದಲ್ಲಾದರೂ ಊರು ಸುತ್ತಬೇಕು ಎಂಬ ಆಸೆ ಇದೆ’ ಎನ್ನುತ್ತಾರೆ.

ಪ್ರತಿ ನಿತ್ಯ ರಾತ್ರಿ ಊಟಕ್ಕೂ ಮುನ್ನ ಬಿಯರ್ ಕುಡಿಯುವುದು ಇವರ ಹವ್ಯಾಸ. ಮನಸ್ಸಿಗೆ ಉಲ್ಲಾಸ ನೀಡಲು ಬಿಯರ್ ಸಹಕಾರಿ. ಗೆಳೆಯರ ಜತೆಗೆ ಇಲ್ಲವೇ ಒಬ್ಬನೇ ಬಿಯರ್ ಕುಡಿಯುವುದರಲ್ಲಿ ಆನಂದ ಸಿಗುತ್ತದೆ ಎಂದು ನಗುತ್ತಾರೆ ಜಿಮ್ಮಿ.

★ ಅವನೀಶ್